ಇನ್ನು ಮುಂದೆ ಈ ಮೊಟ್ಟೆಯ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಣೆ ಮಾಡುವುದಾಗಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಂ.ಡಿ. ನಂಜುಂಡಸ್ವಾಮಿ.—ಒಂದೇ ಒಂದು ವಿಷಯ. ಇದು ಒಬ್ಬ ವ್ಯಕ್ತಿಯ ವಿಷಯ. ಇದು ಇಡೀ ರಾಜ್ಯದ ರೈತರ ಸಮಸ್ಯೆ. ಈಗಾಗಲೇ ತಾವು ಬೇರೆಯವರಿಗೆ ಅವಕಾಶ ಮಾಡಿ ಕೊಟ್ಟಿದ್ದೀರಿ, ನನಗೆ ಏಕೆ ತಾರತಮ್ಯ ಮಾಡುತ್ತೀರಿ...

ಅಧ್ಯಕ್ಷರು.—ನಾವು ಹಾಕಿಕೊಂಡಿರತಕ್ಕ ರೂಲ್ಸ್ ಪ್ರಕಾರ, ಗಮನ ಸೆಳೆಯುವ ಸೂಚನೆಗೆ ಯಾರು ಹೆಸರು ಕೊಟ್ಟಿರುತ್ತಾರೆ, ಅವರಿಗೆ ಮಾತ್ರ ಕೇಳುವುದಕ್ಕೆ ಅವಕಾಶವಿದೆ. ಈಗ ಮುಂದಿನ ಗಮನ ಸೆಳೆಯುವ ಸೂಚನೆ, ಶ್ರೀ ಎಲ್. ಆರ್. ಶಿವರಾಮೇಗೌಡ ತಾವು ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಸರ್ಕಾರದ ಗಮನ ಸೆಳೆದಿರುವ ಪ್ರಶ್ನೆ ಬೇರೆ. ಆದರೆ ಇಲ್ಲಿ ಬಂದಿರತಕ್ಕ ಉತ್ತರವೇ ಬೇರೆ. ಇದಕ್ಕೆ ತಾವು ಪರಿಹಾರ ಒದಗಿಸಬೇಕು. ಇಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇಲ್ಲಿ ಬಂದಿರತಕ್ಕದ್ದು, ಸಹಕಾರ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಮೂಲಕ ರೈತರಿಗೆ ಗೊಬ್ಬರ ವಿತರಣೆಯಾಗದೇ ತೊಂದರೆಯಾಗಿರುವ ಬಗ್ಗೆ ಸಹಕಾರ ರಾಜ್ಯ ಮಂತ್ರಿಗಳ ಗಮನ ಸೆಳೆಯುವುದು ಎಂದು ಬಂದಿದೆ. ಆದರೆ, ನಾನು ಕೇಳಿದ್ದುದ್ದು, ಸಹಕಾರಿ ಸಂಘಗಳು ಗೊಬ್ಬರ ಮತ್ತು ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿದ್ದು, ಇತ್ತೀಚೆಗೆ, ಸಾಲ ಮನ್ನಾ ವಿಚಾರ ಬಂದ ಮೇಲೆ ಅವರುಗಳು ಇಟ್ಟು ಕೊಂಡಿದ್ದ ದುಡಿಮೆ ಬಂಡವಾಳವನ್ನು ಬ್ಯಾಂಕಿನವರಂ ತೆಗೆದುಕೊಂಡು ಬಂದಿರುತ್ತಾರೆ. ಈಗ ದುಡಿಮೆ ಬಂಡವಾಳ ಇಲ್ಲದೇ ಗೊಬ್ಬರ ತಂದು ವ್ಯಾಪಾರ ಮಾಡಲು ಸಹಕಾರಿ ಸಂಸ್ಥೆಗಳಿಗೆ ಶಕ್ತಿ ಇಲ್ಲದಿರುವುದರಿಂದ ರೈತರಿಗೆ ಗೊಬ್ಬರ ಸಿಕ್ಕದೇ ತೊಂದರೆಯಾಗಿದೆ, ಆದ್ದರಿಂದ ಸರ್ಕಾರದ ಗಮನವನ್ನು ಈ ವಿಷಯದಲ್ಲಿ ಸೆಳೆಯುತ್ತೇನೆ ಎಂದು ಕೇಳಿದ್ದೆ. ಈ ವಿಚಾರ ಈಗಾಗಲೇ ಎರಡು ಮೂರು ದಿವಸ ಮುಂದಕ್ಕೆ ಹೋಗಿದೆ.

ಅಧ್ಯಕ್ಷರು.—ಇದನ್ನು ನಾನು ನೋಡಂತ್ತೇನೆ. ಇದನ್ನು ಮುಂದಕ್ಕೆ ತೆಗೆದುಕೊಳ್ಳೋಣ. ಇದರ ಬಗ್ಗೆ ನನ್ನ ಸೀರಿಯಸ್ ಕನ್‌ಸಿಡರೇಷನ್ ಮೈಂಡನ್ನು ಅಪ್ಲೈ ಮಾಡಬೇಕು. ನೀವು ಎತ್ತಿರತಕ್ಕ ಆಕ್ಷೇಪಣೆಗೆ ನನ್ನ ತೀವ್ರವಾದ ಗಮನವನ್ನು ಕೊಡುತ್ತೇನೆ.

ನಿಯಮ ೩೩ಳಿರ ಮೇರೆಗೆ

ಕುಣಿಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಬಗ್ಗೆ

ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಕುಣಿಗಲ್ ಟೌನ್‌ನಲ್ಲಿ ಕುಡಿಯುವ ನೀರಿನ ಬವಣೆಯಿಂದ ನಾಗರೀಕರು ಬಹಳ ವರ್ಷಗಳಿಂದ ಕಂಗಾಲಾಗಿರುತ್ತಾರೆ, ನಾಗರೀಕರು ನೀರಿನ ಬಗ್ಗೆ ಹಿಂದಿನ ಸರಕಾರ ಹಾಗೂ ನಮ್ಮ ಸರಕಾರಕ್ಕೆ ಅನೇಕ ಮನವಿಗಳನ್ನು ಕೊಟ್ಟಮೇಲೆ ನಮ್ಮ ಘನ ಸರಕಾರ ದವರು ಸುವಹರು ಒಂದು ಕೋಟಿ ರೂಪಾಯಿ ಹಣ ಮಂಜೂರಾತಿ ಕೊಡಲು ಒಪ್ಪಿ ಸ್ವಲ್ಪ ಹಣವನ್ನು ಬೋರ್ ತೆಗೆಯಲು ಕೊಟ್ಟು ಬಾಕಿ ಹಣವನ್ನು ಕೊಟ್ಟಿರುವುದಿಲ್ಲ. ಆದ್ದರಿಂದ ತ್ವರಿತವಾಗಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಒತ್ತಾಯಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಕ್ಕಪ್ಪನವರ ನೋಟೀಸಿಗೆ ಉತ್ತರವಾಗಿ ಈ ಕೆಳಕಂಡ ಹೇಳಿಕೆಯನ್ನು ಸದನದ ಮುಂದೆ ಇಡುತ್ತೇನೆ.

The population of Kunigal town as per 1981 census is 18,000 and the present population may be about 21,000. An Augmentation of Water Supply Scheme to Kunigal Town with borewells as source at a cost of Rs. 12.00 lakhs has been Administratively Approved in 1976 and was commissioned.

Uptill now under various scarcity relief programmes 27 bore-wells have been sunk. Out of which 13 borewells are harnessed with power pumps and 14 borewells are harnessed with

hand pumps The Town Municipal Council, Kunigal is maintaining the existing Water Supply Scheme. The per capita rate of Water Supply is 36 LPCD.

In view of the representations of the people of the town, the Board has prepared a line estimate amounting to Rs. 360.00 lakhs for Augmenting Water Supply to Kunigal town with Marconahalli reservoir as source. Detailed estimate in this regard is yet awaited from the Board, for according Administrative Approval.

Under the discretinary grants an amount of Rs. 1.00 lakh was released during 1989-90, out of which one number of 5 H. P. Stand -by submersible pumpset was procured and given to the Town Municipal Council. Further as per the request of the Town Municipal Council, Kunigal it was proposed to lay distribution rider main in the town. The work is held up for want of permission from the National Highway authorities.

Under the discretioneary grants, an amount of Rs. 1.50 lakhs released during 1990-91, two borewells, were sunk harnessing of these borewells are under process.

SRI K. LAKKAPPA.—Sir, I must congratulate the Hon'ble Minister that he has given the reply. He has given a very good detailed reply and it is most satisfactory reply.

MR. SPEAKER.—Under Rule 334, you cannot make a statement. You said you were happy with the statement of the Minister.

SRI K. LAKKAPPA.—There is some obstruction to see that National Highway is coming in the way of obstructing water...,

MR. SPEAKER.—Obstruction will be taken care of.

SRI T. N. NARASIMHA MURTHY.—Sir, right now I cannot make a statement. This is a matter raised by the Hon'ble Member under Rule 334. I have taken note of it.

MR. SPEAKER.—So, you will look into it.

SRI T. N. NARASIMHA MURTHY —I will look into it.

೨ ದಕ್ಷಿಣ ಕನ್ನಡ ಜಿಲ್ಲೆಯ ಶೇಂದಿ ಮೂರ್ತೆದಾರರಿಗೆ ಶೇಂದಿಯನ್ನು ಇಳಿಸಿ ಮಾರಲು ಅವಕಾಶ ಕೊಡುವುದು

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಇರುವ ಬಡ ಶೇಂದಿ ಮೂರ್ತೆದಾರರು ಬಹಳ ಹಿಂದಿನ ಕಾಲದಿಂದಲೂ ವಂಶ ಪಾರಂಪರ್ಯವಾಗಿ ಇದನ್ನು ಕಲಿಕಸುಬನ್ನಾಗಿ ಆರಿಸಿಕೊಂಡು ಜೀವಿಸಿಕೊಂಡು ಬರುತ್ತಿದ್ದರು. ಈಗಲೂ ಈ ಒಂದು ಹಿಂದುಳಿದ ಪಂಗಡದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಶೇಂದಿ ಮೂರ್ತೆಯಿಂದಲೇ ಜೀವಿಸಿಕೊಂಡು ಬರುತ್ತಿದ್ದಾರೆ. ಪ್ರಸಕ್ತ ವರ್ಷದಲ್ಲಿ ರಾಜ್ಯಾದ್ಯಂತ ಶೇಂದಿ ಮಾರಾಟ ಮಾಡುವುದನ್ನು ನಿಷೇಧಿಸಿ ಆದೇಶ ಮಾಡಿರುವುದು ಸರಿಯಷ್ಟೆ. ಈ ಶೇಂದಿ ಮೂರ್ತೆದಾರರು ತಮ್ಮ ದಿನನಿತ್ಯದ ಕಸುಬಾದ ಶೇಂದಿ ಮೂರ್ತೆ ಮಾಡಬಹುದು, ಶೇಂದಿ ಇಳಿಸಬಹುದು, ಕುಡಿಯುವವರಿಗೆ ಕೊಡಬಹುದು ಎಂದು ಒಂದು ಕಡೆಯಿಂದ ಹೇಳಲಾಗುತ್ತಿದೆ. ಆದರೆ ಶೇಂದಿ ಮೂರ್ತೆದಾರರು ತಾವೇ ಈಚಲು ಮರಗಳಿಂದ ಇಳಿಸಿದ ಶೇಂದಿಯನ್ನು ಯಾವರೀತಿಯಿಂದ ಒತ್ತರಿಸಬಹುದು ಎಂದು ಇನ್ನೂ ಸೂಕ್ತ ಆದೇಶ ನೀಡಿಲ್ಲ. ಶೇಂದಿ ಇಳಿಸಲು